ಭಾರತಿ ಮಾನಗೆ, ಹೊನ್ನಾವರ

ಮಕ್ಕಳಿಗೆ 'ಪಬ್‌ಜಿ' ಗೇಮ್ ಏಕೆ ಮಾರಕ?



ಅದೊಂದು ಗೀಳು. ಮಕ್ಕಳಲ್ಲಿ ಗೀಳು ಗೋಳು ಆಗಲು ಹೆಚ್ಚು ಕಾಲ ಬೇಕಾಗಿಲ್ಲ.

ಎಸ್.ಎ. ಮೋಹನರಾಜು, ಶಂಕರಘಟ್ಟ

ತಿಳುವಳಿಕೆ ಮತ್ತು ನಂಬಿಕೆ; ಇವುಗಳಲ್ಲಿ ಯಾವುದು ಹೆಚ್ಚು?

ತಿಳುವಳಿಕೆಯೇ ಹೆಚ್ಚು ಎಂಬುದು ನನ್ನ ನಂಬಿಕೆ.

ಪ್ರೇಮಚಂದ್ರ, ಬೆಂಗಳೂರು

ಪ್ರಪಂಚದಲ್ಲಿ ಕಲಬೆರಕೆ ಆಗದಿರುವುದು ಏನಾದರೂ ಇದೆಯೆ?

ತಾಯಿಯ ಪ್ರೀತಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಸತ್ತವರನ್ನು ಹೆಣ ಎನ್ನುವುದೇಕೆ?

ಅಲ್ಲಿಯವರೆಗೆ ಹೆಣಗಾಡಿ, ಈಗ 'ಗಾಡಿ ಬಿಟ್ಟಿದ್ದರಿಂದ'.

ಮುರಲೀಧರ ಕುಲಕರ್ಣಿ, ಬೀದರ್

ಭಾರತ ಎಂಬ ಹೆಸರಲ್ಲಿ 'ಭಾರ' ಇದೆ. ಆ 'ಭಾರ' ಯಾವುದು?



ಜನಸಂಖ್ಯೆ.

ವಿ. ಹೇಮಂತಕುಮಾರ್, ಬೆಂಗಳೂರು

ಕಾಡಿ ಕೂಡುವುದಕ್ಕೂ, ಕೂಡಿ ಕಾಡುವುದಕ್ಕೂ ವ್ಯತ್ಯಾಸವೇನು ರಾಮ್‌ಜೀ?

ಕಾಡಿ ಕೂಡುವುದು ಬಲಾತ್ಕಾರ, ಕೂಡಿ ಕಾಡುವುದು ಮದುವೆ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ

ಕೈ ಕೆಸರಾದರೆ ಬಾಯಿ ಮೊಸರು. ಕೈ ಮೊಬೈಲ್‌ಮಯವಾದರೆ?

ನೆಟ್‌ವರ್ಕ್ ಹುಡುಕುತ್ತಾ ವ್ಯಕ್ತಿ ಬಯಲುದಾರಿ; ಇದು ಇತರರಿಗೆ ಬೈಯಲು ದಾರಿ.

ಬಾ.ರಂ. ಸುರೇಶ, ಶಿವಮೊಗ್ಗ

ಬೆನ್ನು ಕಾಣುವಂತೆ ರವಿಕೆ ಹಾಕಿಕೊಂಡರೆಷ್ಟು, ಬಿಟ್ಟರೆಷ್ಟು. ಯಾಕೀ ಬಟ್ಟೆಯ ಚೌಕಾಶಿ ಶಿವಾ?

ಹಿಂದುಳಿದ ಪ್ರದೇಶಗಳ ಮೇಲೆ ಹೆಚ್ಚು ಬೆಳಕು ಚೆಲ್ಲುವುದು ಅವರ ಉದ್ದೇಶವಂತೆ.

ನಾರಾಯಣ ಯಾಜಿ, ಶಿರಾಲಿ

ಬಲಗೈಗೆ ಡೆಡ್ಲಿ ಕಾಯಿಲೆ; ಕಾಲುಗಳಲ್ಲೊಂದಕ್ಕೆ ನಿಶ್ಶಕ್ತಿ, ಇನ್ನೊಂದು ಹಟ. ಸಾಮರ್ಥ್ಯ ಇದ್ದೂ ಇಲ್ಲದಂತೆ. ಆ ಬಡಪಾಯಿಯ ಪಾಡೇನು?

ಬ್ಯಾಟರಿ ಆಪರೇಟೆಡ್ ವೀಲ್‌ಚೇರ್ ಪಡೆಯಲಿ. ಮನ ಹಸಿರಿದ್ದರೆ ಜೀವನ ಮತ್ತೆ ಚಿಗುರೀತು.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಹೆಣ್ಣಿನ ಶಕ್ತಿಗೂ, ಗಂಡಿನ ಶಕ್ತಿಗೂ ವ್ಯತ್ಯಾಸವೇನು ಗುರೂಜಿ?

ಗಂಡು ಮಗುವನ್ನು ಒಂಬತ್ತು ಗಂಟೆಯೂ ಹೊರಲಾರ. ಹೆಣ್ಣು ಸರಾಗವಾಗಿ ಒಂಬತ್ತು ತಿಂಗಳು ಹೊರುತ್ತಾಳೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಅತಿಯಾದರೆ ಅಮೃತ ವಿಷವಾಗುತ್ತದಂತೆ. ಮಿತಿ ಇದ್ದರೆ ವಿಷ ಅಮೃತವಾಗುತ್ತಾ?

ಪಾರ್ಟಿಗಳಲ್ಲಿ 'ಲಿಮಿಟ್' ಮೀರದ ಕುಡುಕ ಅಹುದಹುದೆಂದ.

ನರಸಿಂಹ ಪೈ, ಕಾಸರಕೋಡ

ಬದುಕು ಹೊರೆಯಾಗದೆ ಹಗುರವಾಗುವುದು ಯಾವಾಗ?

ಗೌರವಯುತವಾಗಿ ಬೆಂಬಲಿಸುವವರು ದೊರೆತಾಗ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ರೈತರು ದೇಶದ ಬೆನ್ನೆಲುಬು. ರಾಜಕೀಯ ನಾಯಕರು?

ಆ ಎಲುಬನ್ನು ಕಡಿಯುವುದರಲ್ಲೇ ಸಂತೋಷ ಕಾಣುವ 'ನಾಯಕರು'.

ಅಮರಯ್ಯಾ ಪತ್ರಿಮಠ, ಸುರಪುರ

ರಂಗೋಲಿ ಹಾಕಿರದ ಅಂಗಳ, ನಾರಿಯಿಲ್ಲದ ಮನೆ ಯಾವುದಕ್ಕೆ ಸಮ?

ಬಣ್ಣ ಕಳೆದುಕೊಂಡ ಕಾಮನಬಿಲ್ಲಿಗೆ.

## ಬಹುಮಾನಿತ ಪ್ರಶ್ನೆ

ರತ್ನಾ ರಾಜ್‌ಕುಮಾರ್, ಹಾಸನ

ಈಡಿಯಟ್ಸ್ ಚಿತ್ರ ನೋಡುವಾಗ ಯಾರ್‍ಯಾರೋ ನೆನಪಿಗೆ ಬಂದು ಹೋದರಲ್ಲಾ.....?

ಸೋಜಿಗದ ವಿಷಯವೆಂದರೆ ನಮ್ಮನ್ನೇ ನಾವು ಮರೆತುಬಿಟ್ಟಿರುತ್ತೇವೆ.

ರಮೇಶ್, ಹನುಮನಾಳು

ಇಲ್ಲೊಬ್ಬರು ನನ್ನನ್ನು ಕಂಡ ಕೂಡಲೆ ಅಳಿಯ ತೊಳೆಯ ಎನ್ನುತ್ತಾರೆ. ಅದು ಯಾವ ಸಂಭ್ರಮಕ್ಕೆ ಸ್ವಾಮಿ?

ನೀವು ನಿಮ್ಮ ಮಾವನ ಮನೆಗೆ ಹಣ್ಣಿನ ತೊಳೆಯ ಹಾಗೆ ಎನ್ನುತ್ತಿದ್ದಾರೆ. ತಪ್ಪಿದ್ದರೆ ಕ್ಷಮಿಸಿ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಎಲ್ಲರೆದುರು ತಂದೆತಾಯಿಗಳು ಗ್ರೇಟ್. ಮನೆಯಲ್ಲಿ ಮಕ್ಕಳೆದುರು ಅವರೇಕೆ 'ರಿಗ್ರೆಟ್'?

ಬೀದಿ ಸ್ವಚ್ಛಗೊಳಿಸುವ ಪೊರಕೆ ಮನೆಯಲ್ಲಿ ಉಪಯೋಗಕ್ಕೆ ಬಾರದು.

ಆದಿನಾರಾಯಣಮುನಿ, ಬೆಂಗಳೂರು

ನಮ್ಮನ್ನು ಪ್ರೀತಿಸುವವರಿಗೆ ನಾವು ಏನನ್ನು ಕೊಡಬಹುದು?



ಸಮಯ.

ಆರ್. ಮಧುಸೂದನ್, ಹಾಸನ

ಸಿಗರೇಟು ಸೇದಿದ ತುಟಿಯನ್ನು ಹೆಣ್ಣಿನ ಮಧುರವಾದ ತುಟಿಗಳ ಹತ್ತಿರ ತರುವುದು ಅರಸಿಕತನ ಅಲ್ಲವೆ?

ಹೆಂಡದ ತುಟಿಯೂ ದೂರವಿರಬೇಕು. ರಸಮಯತೆಗೆ ನೈಸರ್ಗಿಕತೆಯೇ ಸೂಕ್ತ, ಆಪ್ತ.

ಎ.ಕೆ. ಪಟ್ಟಾಭಿ, ಬೆಂಗಳೂರು

ರಾಜಕಾರಣಿಗಳು ಕುಳಿತುಕೊಳ್ಳುವ ಕುರ್ಚಿಗೆ ಬಳಸುವ ಅಂಟು ಯಾವುದು?

ಕರಾಪ್ಷೀಟ್.

■ ರಾಮ್